13

# ಬೆಸೋರಿನ ಯೋಧ

## ಅಲ್ಪ ಸೇವೆಗೆ ಪ್ರತಿಫಲ ದೊರೆತದ್ದು

## (30:21-25)

ಎರಡನೇಯ ಜಾಗತಿಕ ಯುದ್ಧದ ಸಮಯದಲ್ಲಿ, "ಸ್ವದೇಶದ ಯುದ್ಧ ಭೂಮಿ" ಎಂಬ ಪದ ಬಹಳವಾಗಿ ಕೇಳಿಬರುತ್ತಿತ್ತು. ಆ ಯುಗದ ಒಬ್ಬ ನಾಯಕರು ಸಂಕ್ಷಿಪ್ತ ವಾಗಿ ಮತ್ತು ಸ್ಪಷ್ಟವಾಗಿ ಈ ಸಂದೇಶವನ್ನು ಹೇಳುತ್ತಾರೆ: "ನಿಂತು ಕೊಂಡು ಕಾಯುವಂಥವರೂ ಕೂಡ ಸೇವೆ ಮಾಡುತ್ತಾರೆ." ಅದರ ಅರ್ಥ ಸ್ಪಷ್ಟವಾಗಿದೆ. ಎಷ್ಟೇ ಅಲ್ಪವಾಗಿ ತೋರಿದರೂ, ನೀನು ಮಾಡುವದು, ಯುದ್ಧದ ಪ್ರಯತ್ನಗಳಿಗೆ ಸಹಾಯಕ ವಾಗುವದು. ಹೊರದೇಶದಲ್ಲಿಯೋ ಅಥವಾ "ಸ್ವದೇಶದಲ್ಲಿಯೋ," ಅಮೇರಿಕದ ಸರ್ವರೂ ಯುದ್ಧದಲ್ಲಿ ತೊಡಗಿದ್ದರು.

ಅಂಥ ಒಂದು ಸೇವೆಯಲ್ಲಿ ಐಕ್ಯತೆಯು 30:21-25ರಲ್ಲಿ ಕಂಡು ಬರುತ್ತದೆ. ದಾವೀದ ಮತ್ತು ಅವನ ಆರುನೂರು ಸೈನಿಕರು ಚಿಕ್ಲಗ್ ಊರಿಗೆ ಹಿಂತಿರುಗಿದಾಗ ತಾವು ಇಷ್ಟಪಡುತ್ತಿದ್ದ ಎಲ್ಲವೂ ಸುಟ್ಟು ನಾಶವಾಗಿದ್ದವು. ಅವರ ಮನೆಗಳು ಹೊಗೆಯಾಡುತ್ತಿದ್ದವು, ಅವರ ಕುಟುಂಬದವರು ಸೆರೆಯಾಗಿ ಹೋಗಿದ್ದರು ಮತ್ತು ಅವರ ಸೊತ್ತು ಅಪಹರಿಸಲ್ಪಟ್ಟಿದ್ದವು. ಯುದ್ಧದಲ್ಲಿನ ನಾಶನದಿಂದ ಕಠಿಣರಾಗಿದ್ದ ನುರಿತ ಯೋಧರು ದುಃಖದಿಂದ ಭಾವಾವೇಶ ವುಳ್ಳವರಾದರು (30:4). ದೇವರನ್ನು ವಿಚಾರಿಸಿ, ದಾವೀದನು ಇದಕ್ಕೆ ಕಾರಣರಾಗಿದ್ದ ಅಮಾಲೇಕ್ಯರನ್ನು ಹಿಂದಟ್ಟಿದನು. ಅವನ ಸೇನೆಯು ಆಯಾಸಗೊಂಡಿತ್ತು. ಅದರ ಜೊತೆ ಉದ್ವೇಗದಿಂದಲೂ ಆಯಾಸಗೊಂಡಿದ್ದರಿಂದಲೂ, ಎರಡು ನೂರು ಜನರು ಬೆಸೋರಿ ನಲ್ಲಿ ಬೇಡವಾದ ಸಾಮಾಗ್ರಿಗಳನ್ನು ಕಾಯುವದಕ್ಕೆ ಬಿಡಲ್ಪಟ್ಟರು. ಇನ್ನುಳಿದ ನಾಲ್ಕುನೂರು ಸೈನಿಕರು ಬೇಗನೆ ಕೊಳ್ಳೆ ಹೊಡೆದವರನ್ನು ಹಿಂದಟ್ಟಿದರು ಮತ್ತು ಕಳಕೊಂಡದ್ದನೆಲ್ಲ ಹಿಂದೆ ತಂದರು. ಬೆಸೋರಿಗೆ ಹಿಂತಿರುಗಿದಾಗ, "ಸಾಮಾನುಗಳನ್ನು ಕಾಯುವದಕ್ಕೆ" ಬಿಟ್ಟು ಹೋಗಿದ್ದ ಇನ್ನೂರು ಜನರು ಕೊಳ್ಳೆಯಲ್ಲಿ ಪಾಲು ತೆಗೆದುಕೊಳ್ಳಬಾರದೆಂದು ನಾಲ್ಕು ನೂರು ಜನರು ವಾಗ್ವಾದ ಮಾಡಿದರು. ಅವರಲ್ಲಿದ್ದ ದ್ವೇಷದ ಭಾವನೆಯು ಈ ಮಾತುಗಳನ್ನು ಹೊರಡಿಸಿತು 30:22-24.

ಸರ್ವಶಕ್ತನಾದ ದೇವರಿಗೆ ಸೇವೆ ಮಾಡುವುದರ ಕುರಿತು ಇಲ್ಲಿ ಒಂದು ಅಮೂಲ್ಯ ವಾದ ಸತ್ಯವಿದೆ. ಆ ನಾಲ್ಕುನೂರು ಜನರು ಸೇವೆಯನ್ನು ನಕಾರಾತ್ಮಕವಾಗಿ ದೃಷ್ಟಿಸಿದ್ದು ಅವರ ಮಾತುಗಳಲ್ಲಿ ಕಂಡು ಬಂದಿತು. ಕೆಲವು ಸೇವೆಯನ್ನು ಹೇಗೆ ಮನುಷ್ಯನು ಅಲ್ಪವೆಂದೆ ಣಿಸುತ್ತಾನೆ ಮತ್ತು ಹೇಗೆ ದೇವರು ಅದೇ ಸೇವೆಯನ್ನು ಪರಿಗಣಿಸುತ್ತಾನೆ ಎಂಬ ಅದ್ಭುತವಾದ ಸತ್ಯವನ್ನು ಇಲ್ಲಿ ನೋಡುತ್ತೇವೆ.

### ತತ್ವವು ಹೇಳಲ್ಪಟ್ಟದ್ದು

ದಾವೀದನು ಈ ನಾಲ್ಕು ನೂರು ಜನರ ಮಾತುಗಳನ್ನು ಕೇಳಿಸಿಕೊಂಡ ಕೂಡಲೇ ಆ ತಪ್ಪನ್ನು ತಿದ್ದು ಪಡಿಮಾಡಿದನು. ದಾವೀದನ ಪ್ರಕಾರ ಎಲ್ಲರೂ ಸೇವೆಯಲ್ಲಿದ್ದರು. ಕೆಲವರು ಕೆಲವು ಕೆಲಸಗಳನ್ನು ಮಾಡಿದರೆ, ಇನ್ನು ಕೆಲವರು ಬೇರೆ ಕೆಲಸವನ್ನು ಮಾಡಿದರು. ಒಬ್ಬನು

ಕಾಳಗದಲ್ಲಿ ತೊಡಗಿದ್ದರೂ ಅಥವಾ ಸಾಮಾನುಗಳನ್ನು ಕಾಯುತ್ತಿದ್ದರೂ, ದಾವೀದನ ದೃಷ್ಟಿಯಲ್ಲಿ ಇಬ್ಬರೂ ಅತೀ ಅವಶ್ಯವಾದ ಸೇವೆಯನ್ನು ಮಾಡುತ್ತಿದ್ದರು!

ಬೈಬಲಿನ ಅನೇಕ ಭಾಗಗಳಲ್ಲಿ ಈ ತತ್ವವು ಕಂಡು ಬರುತ್ತದೆ. "ಅಲ್ಪವಾ ದರೂ" ಸರಿಯೇ, ಯಾವ ಕೆಲಸವನ್ನೂ ಮಾಡಲು ಹಿಂಜರಿಯದ ಪ್ರತಿಯೊಬ್ಬರ ವಿಷಯದಲ್ಲಿರುವ ದೇವರ ಕಳಕಳಿಯನ್ನು ತೋರಿಸುತ್ತದೆ! ಜೆಕರ್ಯ 4:10ರಲ್ಲಿ, ಆಲಯದ ಕೆಲಸವು ಒಂದು ಅಲ್ಪ ತೂಕದ ಗುಂಡಿನಿಂದ ಪ್ರಾರಂಭವಾಗಲಿಕ್ಕಿತ್ತು. ಗೋಡೆಯನ್ನು ಅಳತೆ ಮಾಡುವ ಅಲ್ಪ ಕಾರ್ಯವನ್ನು ಮಾಡುತ್ತಿದ್ದವರ ವಿಷಯದಲ್ಲಿ ದೇವರು ಸಂತೋಷಿಸಿದನು. ಮಾರ್ಕ 14:8ರಲ್ಲಿ ಮರಿಯಳು ಕ್ರಿಸ್ತನನ್ನು ಅಭಿಷೇಕಿ ಸಿದಾಗ, ಅವಳು ಮಾಡಿದ್ದು ಅದೊಂದೇ ಕಾರ್ಯ. ಕೆಲವರು ಅದನ್ನು ಹಾಳು ಎಂದುಕೊಂಡರು, ಆದರೆ ನಮ್ಮ ಕರ್ತನು ಹಾಗೆ ತಿಳಿದುಕೊಳ್ಳಲಿಲ್ಲ! ಯೋಹಾನ 6:9ರಲ್ಲಿ, ಒಂದು ಚಿಕ್ಕ ಊಟ ಅಂದ್ರೇಯನಿಗೆ ಅಲ್ಪವೆಂದು ತೋರಿತು ಆದರೆ ಕ್ರಿಸ್ತನು ಅದನ್ನು ಮಹಾ ಉದ್ದೇಶಕ್ಕೆ ಉಪಯೋಗಿಸಿದನು. ಯಾವದು ಚಿಕ್ಕದಾಗಿಯೂ ಮತ್ತು ಕೀಳಾಗಿಯೂ ತೋರುತ್ತದೋ ಅದನ್ನು ಕಡೆಗಣಿಸಿ ತಿರಸ್ಕರಿಸುತ್ತಾರೆ. ಆದರೆ ಕರ್ತನು ಅವುಗಳನ್ನು ಉಪಯೋಗಿಸುತ್ತಾನೆ (ಮತ್ತಾಯ 10:42; ಮಾರ್ಕ 9:41; ಇತ್ಯಾದಿ.). ದೇವರಿಗೆ ಎಲ್ಲಾ ಸೇವೆಯು ಪ್ರಾಮುಖ್ಯವೇ! (ಜೆಕರ್ಯ 4:66).

## ತತ್ವವು ಕಾರ್ಯಗತವಾದದ್ದು

ಇನ್ನೂರು ಜನರು ಬೇಡವಾದ ಸಾಮಾನುಗಳನ್ನು ಕಾಯುವದಕ್ಕೆ ಬಿಡಲ್ಪಟ್ಟಿದ್ದರು. ಇದು ದಾವೀದನನ್ನು ವೇಗವಾಗಿ ಚಲಿಸುವಂತೆ ಮಾಡಿ ಅಮಾಲೇಕ್ಯರನ್ನು ದಾಟಿಹೋಗುವಂತೆ ಮಾಡಿತು. ಈ ಇನ್ನೂರು ಜನರು ಬಹು ಪ್ರಾಮುಖ್ಯವಾದ ಪಾತ್ರ ವಹಿಸುವದರ ಮೂಲಕ ಜಯದಲ್ಲಿ ಭಾಗಿಗಳಾದರು. ಜಯದೊರೆತ ನಂತರ ದಾವೀದನು ಇನ್ನೂರು ಜನರನ್ನು ಬೆಸೋರಿನಲ್ಲಿ ವಂದಿಸಿದನು.

*ನಾವೆಲ್ಲರೂ ಸರಿಸಮಾನರಾದ ಸೇವಕರೇ, ಪ್ರತಿಯೊಬ್ಬನಿಗೂ ಅವನವನ ಸರಿಯಾದ ಕೆಲಸವಿದೆ ಎಂದು ಅವನ ವಂದನೆಯಲ್ಲಿ ಅಡಕವಾಗಿತ್ತು.* ಈ ಯೋಧರಿಗೆ ಅಲ್ಲಿದ್ದುಕೊಂಡು ಸಾಮಾನುಗಳನ್ನು ಕಾಯಲು ಹೇಳಿದ್ದರು. ಅವರ ಕೆಲಸವೂ ಪ್ರಾಮುಖ್ಯವಾಗಿತ್ತು. ಈ ಪಾಠವನ್ನು ಅರಿತುಕೊಳ್ಳಲು ವಿಫಲರಾಗುತ್ತಾರೆ, ಯಾಕೆಂದರೆ ನಾವು ಸೇವೆಗಳನ್ನು ವಿಂಗಡಿಸಿ ಮತ್ತು ವರ್ಗೀಕರಿಸಿ, ಅವುಗಳ "ಪ್ರಾಮುಖ್ಯತೆಯ" ಪ್ರಕಾರ ದರ್ಜೆ ಕೊಡುತ್ತೇವೆ.

ಈ ರೀತಿಯಾದ ವರ್ತನೆಯು ಕೊರಿಂಥದಲ್ಲಿ ದುಃಖಕರವಾದ ಪರಿಣಾಮವನ್ನು ಬೀರಿತು, ಈ ತಪ್ಪನ್ನು ಎದುರಿಸಿ ಪೌಲನು ಮೂರು ಬಲವಾದ ಅಂಶಗಳನ್ನು ಒತ್ತಿ ಹೇಳುತ್ತಾನೆ (1 ಕೊರಿಂಥ 12:12-28). ಮೊದಲಿಗೆ, ಪ್ರತಿಯೊಬ್ಬ ಸದಸ್ಯನು ವಿಭಿನ್ನನ್ನೇ ಆಗಿದ್ದಾನೆ ಆದರೂ ಅವನು ಸಮಾನನೇ (1 ಕೊರಿಂಥ 12:15). ಎರಡನೇಯದು, ಪ್ರತಿಯೊಬ್ಬ ಸದಸ್ಯನು ಇನ್ನೊಬ್ಬನಿಗೆ ಬದ್ಧನಾಗಿದ್ದಾನೆ (1 ಕೊರಿಂಥ 12:26; ಕೊಲೊಸ್ಸೆ 2:2). ಮೂರನೇಯದಾಗಿ, "ಸಾಮಾನ್ಯವಾಗಿರುವಂಥಾದ್ದು" ಬಹಳ ಬೇಕಾಗಿರುವದು (1 ಕೊರಿಂಥ 12:22-24).

ಒಂದು ಸಾರಿ, ಪ್ರಾಣಿಗಳ ಗುಂಪು ತಮ್ಮ ಸೌಖ್ಯವನ್ನು ಅಭಿವೃದ್ಧಿಪಡಿಸಿಕೊಳ್ಳುವ ಉದ್ದೇಶದಿಂದ ಒಂದು ಶಾಲೆಯನ್ನು ಪ್ರಾರಂಭಿಸಿದವು. ಆ ಶಾಲೆಯಲ್ಲಿ ಈಜು, ಓಡುವದು, ಏರುವದು ಮತ್ತು ಹಾರುವದು ಇತ್ತು. ಬಾತುಕೋಳಿ, ಉತ್ತಮ ಈಜು ಬಲ್ಲದ್ದಾದರೂ, ಇತರ ಕ್ಷೇತ್ರಗಳಲ್ಲಿ ಬಲಹೀನವಾಗಿತ್ತು. ಆದುದರಿಂದ ಅದು ಈಜುವದಕ್ಕೆ ವಿರುದ್ಧವಾಗಿ ಹತ್ತುವದು, ಓಡುವದು ಮತ್ತು ಹಾರುವದರಲ್ಲಿ ಲಕ್ಷ್ಯಕೊಟ್ಟಿತು. ಮೊಲವು, ಉತ್ತಮ ಓಟಗಾರ, ಆದರೆ ಉಳಿದ ವರ್ಗಗಳಲ್ಲಿ ಸಮಯ ಕಳೆಯುವದಕ್ಕೆ ಒತ್ತಾಯಿಸಲ್ಪಟ್ಟಿತ್ತು. ಮತ್ತು ತನ್ನ ಹೆಸರು ವಾಸಿಯಾದ ವೇಗವನ್ನು ಕಳೆದು ಕೊಂಡಿತು. ಹತ್ತುವದರಲ್ಲಿ ಮೊದಲ ಸ್ಥಾನ

ಪಡೆದ ಅಳಿಲು, ಕೊನೆಯ ಸ್ಥಾನಕ್ಕೆ ಇಳಿಯಿತು, ಕಾರಣ ಅದರ ಶಿಕ್ಷಕ ಅದಕ್ಕೆ ಈಜಲು ಮತ್ತು ಹಾರಲು ಕಲಿಸಲು ಅನೇಕ ತಾಸುಗಳನ್ನು ತೆಗೆದುಕೊಂಡನು. ಹದ್ದು ಮರದ ಮೇಲಕ್ಕೆ ಹಾರುವದರಲ್ಲಿ ಶಿಕ್ಷಿತನಾಗಿದ್ದರೂ, ಹಾರುವದು ಅದಕ್ಕೆ ಸಹಜವಾಗಿತ್ತಾದರೂ ಮೇಲೆ ಹೇಗೆ ಏರಬೇಕೆಂದು ಕಲಿಯತೊಡಗಿತು. ಇಂದು ಸಭೆಗಳಲ್ಲಿ ಏನಾಗುತ್ತದೆ ಎಂದು ಇದು ಉತ್ತಮ ವಾಗಿ ಚಿತ್ರಿಸುತ್ತದೆ. ಪ್ರತಿಯೊಬ್ಬನಿಗೂ ವಿಶಿಷ್ಟವಾದ ವರಗಳಿವೆ, ಆದರೆ ಕೆಲವರು ತಮಗೆ ಮೀರಿದ್ದನ್ನು ಸಾಧಿಸುವದಕ್ಕೆ ಹೋಗುತ್ತಾರೆ. ಅವರು "ದೊಡ್ಡ ಕಾರ್ಯಗಳನ್ನು" ಮಾಡದ ಕಾರಣ ಅವರನ್ನು ಕ್ಷುಲಕವಾಗಿ ಕಾಣುತ್ತಾರೆ (ಹೋಲಿಸು ರೋಮಾಪುರ 12:6). ಬೆಸೋರಿನ ಸಂದೇಶವು ಈ ತತ್ವವು ತಪ್ಪೆಂದು ತೋರಿಸುತ್ತದೆ, ಯಾಕೆಂದರೆ ಎಲ್ಲರೂ ವಿಭಿನ್ನರಾಗಿದ್ದರೂ ಎಲ್ಲರೂ ಸಮಾನರೇ!

*ಸಭಾ ಸೇವೆಯಲ್ಲಿ ದೇವರ ಉದ್ದೇಶಗಳನ್ನು ನೆರವೇರಿಸಲು ವಿಭಿನ್ನತೆ ಬಹು ಅವಶ್ಯ.* ನೀನು ಯುದ್ಧ ಭೂಮಿಯಲ್ಲಿ ಇಲ್ಲವೆಂದು, "ಬೆಸೋರಿನಲ್ಲಿ ಕುಳಿತು" ಆಳುವದರಲ್ಲಿ ಯಾವ ಅರ್ಥವಿಲ್ಲ! ಇನ್ನೊಬ್ಬನು ಮಾಡಬಹುದಾದ್ದನ್ನು ನೀನು ಮಾಡಲಾರಿ ಎಂದು ಚಿಂತೆ ಮಾಡುವದು ವ್ಯರ್ಥ. ದೇವರ ಸೈನ್ಯದಲ್ಲಿರುವ ನಮ್ಮ ಕಳಕಳಿಯು, ಪ್ರಸಂಗಿ 9:10 ರಂತೆ ಕ್ರೋಢಿಕರಿಸಲ್ಪಡಬೇಕು. ನಾವು ವೈಯಕ್ತಿಕವಾಗಿ ಏನು ಮಾಡುತ್ತೇವೋ ಅದಕ್ಕೆ ನಾವೇ ಜವಾಬ್ದಾರರು! ವೈಯಕ್ತಿಕ ಕರ್ತವ್ಯದ ಕುರಿತು ಒಬ್ಬ ಅನಾಮಧೇಯ ಕವಿ ರಚಿಸಿದ ಕವಿತೆ ಹೀಗಿದೆ.

## ಸೂರ್ಯಾಸ್ತಮಾನ

ನೀನು ದಿನವನ್ನು ಸುಮ್ಮನ್ನೇ ಕಳೆದೆಯಾ ಅಥವಾ ಉಪಯೋಗಿಸಿದೆಯಾ?
ಅದು ಉತ್ತಮವಾಗಿತ್ತೋ ಅಥವಾ ಅಲ್ಪವಾಗಿ ಕಳೆಯಿತೋ?
ನೀನು ಒಂದು ಬೆಳಕಿನ ಕಿರಣವನ್ನು ಚೆಲ್ಲಿರುವೆಯಾ,
ಅಥವಾ ಅಸಮಧಾನದ ಕಲೆ?

ತೂಕಡಿಕೆಯಲ್ಲಿ ನಿನ್ನ ಕಣ್ಣುಗಳನ್ನು ನೀನು ಮುಚ್ಚುವಾಗ
ಇನ್ನೊಂದು ಹೊಸದಿನವನ್ನು ನೀನು ಗಳಿಸಿರುವಿ,
ಇಂದು ನೀನು ಮಾಡಿದ ಕೆಲಸದಿಂದಲೋ?

*ಗಮನಸೆಳೆಯದ ಮತ್ತು ತಲೆಹಾಕದ ಸೇವೆಯು ದೇವರಿಗೆ ಬಹು ಪ್ರಾಮುಖ್ಯ.* "ಕಣ್ಣಿಗೆ ಕಾಣುವ" ಸ್ಥಳಗಳಲ್ಲಿ ಸೇವೆ ಮಾಡಲು ತಲಾಂತುಗಳಿಲ್ಲದೇ ವಿಫಲರಾಗುವವರು, ಶಾಂತವಾದ ಮತ್ತು ಕಣ್ಣಿಗೆ ಗೋಚರವಾಗದ ಸೇವೆಗಳಲ್ಲಿ ಉತ್ತಮವಾಗಿ ಸೇವೆ ಮಾಡಬಹುದು. ಅದು ದೇವರ ರಾಜ್ಯದಲ್ಲಿ ಬಹು ಪ್ರಮುಖ್ಯವಾಗಿದೆ. ಬೋಧಕರು ಮತ್ತು ಹಿರಿಯರು ಮುಂದೆ ಇರಬಹುದು, ಆದರೆ ಭಕ್ತಿವಂತ ತಂದೆ ತಾಯಿಗಳಿಲ್ಲದೇ, ಸೌಮ್ಯ ಮತ್ತು ಜ್ಞಾನಿಗಳಾದ ಭಕ್ತರಿಲ್ಲದೇ, ತಮ್ಮ ದುಗ್ಗಾಣಿಯನ್ನು ಕಾಣಿಕೆಯಾಗಿ ಕೊಡುವ ವಿಧವೆಯರಿಲ್ಲದೇ ಮತ್ತು ತಾಸುಗಟ್ಟಳೆ ಅವರಿಗಾಗಿ ಹೋರಾಡುತ್ತಾ ಪ್ರಾರ್ಥನೆಯಲ್ಲಿ ಕಳೆ ಯುವವರಿಲ್ಲದೇ ಅವರೆಲ್ಲರಬಹುದು? ಇಂದು ಸಭೆಗಳು ಬಹು ಎತ್ತರ ಸ್ಥಾನದಲ್ಲಿವೆ ಯಾಕೆಂದರೆ ಅನೇಕರು "ಬೆಸೋರಿನಲ್ಲಿ ಕುಳಿತು" ಶಾಂತರಾಗಿ ಸೇವೆ ಮಾಡಿದ್ದಾರೆ! (ಪ್ರಸಂಗಿ 9:10).

*ನಮ್ಮ ಸೇವೆಯು ನಿತ್ಯದಲ್ಲಿ ಗುರುತಿಸಲ್ಪಡುವದು.* ದಾವೀದನು ಬೆಸೋರಿಗೆ ಹಿಂತಿರುಗಿದಾಗ, ಸಾಮಾನುಗಳೊಂದಿಗೆ ಇದ್ದವರನ್ನು ಎದುರುಗೊಂಡನು ಅಥವಾ ವಂದಿಸಿದನು (30:21). ವಂದಿಸುವದು ಗೌರವದ ಚಿಹ್ನೆಯಾಗಿದೆ ಮತ್ತು ಅವರಲ್ಲಿ ಆಸಕ್ತಿ

ತೋರಿಸುತ್ತದೆ. ಹೀಗೆ ಮಾಡುವಾಗ ಅವನು ಮೋಶೆ (ಅರಣ್ಯ ಕಾಂಡ 31:27) ಮತ್ತು ಯೆಹೋಶುವರನ್ನು (22:8) ಅನುಸರಿಸಿದನು. ದಾವೀದನ ಮನ್ನಣೆ ಎಷ್ಟಿತ್ತೋ, ಅದಕ್ಕಿಂತ ಹೆಚ್ಚು ಮನ್ನಣೆ ಕ್ರಿಸ್ತನ ಸೇವೆ ಮಾಡುವವರಿಗೆ ದೊರಕುತ್ತದೆ (ಮತ್ತಾಯ 10:2; 25:35, 36). ಆ ಕೊನೆಯ ದಿನದಲ್ಲಿ ಕ್ರಿಸ್ತನಿಂದ ಮನ್ನಣೆ ಪಡೆಯುವದು ಎಷ್ಟು ಅದ್ಭುತವಾಗಿದೆ (ಮಾರ್ಕ 14:8). ಬೆಸೋರಿನವರ ತತ್ವವನ್ನು ಅನುಸರಿಸುವವರಿಗೆ ಇದು ಸಿದ್ಧವಾಗಿದೆ.

## ತತ್ವದ ಸವಾಲು

ಈ ತತ್ವವು ಎಷ್ಟು ಮಹತ್ತರವಾಗಿದೆಯೋ ಅಷ್ಟೇ ಭಯಂಕರವಾದ ಸವಾಲು ಅದರ ರೂಢಿಯನ್ನು ನಿಲ್ಲಿಸುತ್ತದೆ. ಜೆಕರ್ಯ 4:10ಬಿ ನಲ್ಲಿ ಈ ಸವಾಲು "ತಿರಸ್ಕರಿಸು" ಎಂಬ ಪದದಲ್ಲಿ ಪ್ರಕಟವಾಗುತ್ತದೆ. "ತಿರಸ್ಕಾರ" ಎಂಬ ಪದದ ಅರ್ಥ, ತಾತ್ಸಾರದಿಂದ ನೋಡು, ಕ್ಷುಲ್ಲಕವೆಂದು ಪರಿಗಣಿಸು ಅಥವಾ ಅಲ್ಪ ಪ್ರಾಮುಖ್ಯತೆಯನ್ನು ಕೊಡು. ಇದು 30:22ರಲ್ಲಿ ಆಯಿತು. ಸಾಮಾನುಗಳೊಂದಿಗೆ ಉಳಿದವರನ್ನು ಕಡಿಮೆಯಾಗಿ ನೋಡಲಾಯಿತು. ಹೆಮ್ಮೆ ಸ್ವಾರ್ಥ ಮತ್ತು ಅಹಂಕಾರ ಒಟ್ಟಾಗಿ ಸೇರಿ ಸೇವೆಯ ಈ ಉತ್ತಮವಾದ ತತ್ವವನ್ನು ತುಳಿದು ಬಿಟ್ಟವು. ದುಃಖಕರವಾಗಿ ಇದು ಇಂದೂ ಕೂಡ ನಡೆಯುತ್ತಿದೆ.

ಸೇವೆಯ ತತ್ವವು ಎರಡು ವಿಸ್ತಾರವಾದ ಕ್ಷೇತ್ರಗಳಲ್ಲಿ ಸವಾಲು ಎದುರಿಸಿದೆ ಮತ್ತು ಕೆಲವೊಮ್ಮೆ ಸೋಲು ಅನುಭವಿಸಿದೆ. ಮೊದಲಿಗೆ, "ಸಾಮಾನುಗಳೊಂದಿಗೆ ಉಳಿದವರಲ್ಲಿ" ಸರಿಯಾದ ತಿಳುವಳಿಕೆ ಇರದ ಕಾರಣ ನಿರಾಶರಾಗುತ್ತಾರೆ (ಮತ್ತಾಯ 18:6). ಯಾವುದೇ ಸೇವೆಯಿರಲಿ, ಸೇವೆ ಮಾಡುವವರು ದೇವರು ಸೇವೆ ಮಾಡುತ್ತಾರೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕು! ಈ ತಿಳುವಳಿಕೆಯು, ನಡೆಯುತ್ತಿರುವ *ಎಲ್ಲಾ* ಕೆಲಸಗಳಿಗಾಗಿ ಕೃತಜ್ಞರಾಗಿರುವದಕ್ಕೆ ಶಕ್ತರನ್ನಾಗಿಸುತ್ತದೆ!

ಎರಡನೇಯದಾಗಿ, "ಸಾಮಾನುಗಳೊಂದಿಗೆ ಇರುವವರ" ವಿಷಯದಲ್ಲಿ ಸೂಕ್ಷ್ಮತೆ ಇಲ್ಲದಿರುವದು ತೋರಿಬರುತ್ತದೆ (30:22). ಯುದ್ಧದಿಂದ ಹಿಂತಿರುಗಿ ಬರುವವರು ಸಾಮಾನುಗಳೊಂದಿಗೆ ಇದ್ದವರನ್ನು ನಡೆಸಿಕೊಂಡ ರೀತಿಯನ್ನು ಲಕ್ಷ್ಯವಿಟ್ಟು ಗಮನಿಸಿರಿ. ಅವರು ಸಿಡುಕಿದರು, ಕಠಿಣರಾದರು ಮತ್ತು ಅಗೌರವದಿಂದ ನಡೆದುಕೊಂಡರು! ಇದು ದಾವೀದನಿಗೆ ವಿರುದ್ಧವಾಗಿತ್ತು. ಅವನು ಅವರನ್ನು ಎದುರುಗೊಂಡನು ಮತ್ತು ಕರುಣೆಯನ್ನು ತೋರಿಸಿದನು (30:21).

## ಮುಕ್ತಾಯ

ಕ್ರಿಸ್ತನ ಸಭೆಯಲ್ಲಿ ನಾವೆಲ್ಲರೂ ನೇಮಕಗೊಂಡಿದ್ದೇವೆ. ನಾವೇನು ಮಾಡಲು ಶಕ್ತರೋ ಅದನ್ನು ನಾವು ಮಾಡಬೇಕು (1 ತಿಮೊಥೆ 1:12; ಲೂಕ 12:42, 43, 47, 48; ಮಾರ್ಕ 14:8).

ನೀವು ಕರ್ತನ ಆಲಯದಲ್ಲಿ ಯಾವ ಸೇವೆ ಮಾಡುತ್ತಿದ್ದೀರೆಂದು ಅವಲೋಕಿಸಿರಿ. ಅರಾಧನಾ ಕೂಟಗಳು ಗೌರವದ ಮತ್ತು ಅಭಿವೃದ್ಧಿಗೊಳಿಸುವ ವಾತಾವರಣ ನಿರ್ಮಿಸುವಂತೆ, ನಿಮ್ಮಿಂದ ಯಾವ ಸೇವೆ ಆಗುತ್ತದೋ ಅದನ್ನು ಮಾಡಿರಿ. ಅನೇಕ ವೇಳೆ "ಅಲ್ಪ ಕಾರ್ಯಗಳು," ಅತಿಥಿಗಳು ಅರಾಧನೆಯ ಸಮಯವನ್ನು ನಿಧಾನವಾಗಿ ಚಿಂತನೆ ಮಾಡಿ ಆನಂದಿಸುವಂತೆ ಮಾಡುತ್ತವೆ. ತಪ್ಪಿ ಹೋದವರಿಗೆ ಕ್ರಿಸ್ತನು ನಿಮ್ಮಲ್ಲಿ ಇದ್ದನೆಂದು ತೋರಿಸುವದಕ್ಕೆ ನಿಮಗೇನು ಸಾಧ್ಯವೋ ಅದನ್ನು ಮಾಡಿರಿ. ಕೆಲವೊಮ್ಮೆ ಈ ಅಲ್ಪ ಕಾರ್ಯಗಳು ವಿಶ್ವಾಸವನ್ನು ಗೆದ್ದುಕೊಂಡು ಭವಿಷ್ಯದಲ್ಲಿ ಮಾತುಕತೆಗೆ ಮಾರ್ಗ ಮಾಡಿಕೊಡುತ್ತದೆ. ನಿಮ್ಮ ಸಹೋದರರನ್ನು ಉತ್ತೇಜಿಸುವಂತೆ ಏನನ್ನಾದರೂ ಮಾಡಿರಿ.

ಕೆಲವೊಮ್ಮೆ ಈ "ಅಲ್ಪ ಸಂಗತಿಗಳು" ಕರುಣೆ ಮತ್ತು ಗಮನಿಸುವಿಕೆಯಿಂದ ಉತ್ತೇಜನಗೊಂಡು, ಉತ್ಸಾಹವನ್ನು ಮತ್ತು ಭಕ್ತಿಯನ್ನು ಬಳಲಿದ ಹೃದಯಗಳಲ್ಲಿ ಉಜ್ವಲಿಸುವಂತೆ ಮಾಡುತ್ತದೆ.

ಬೆಸೋಲಿನ ಯೋಧರು ಸೇವೆಯ ವಿಷಯದಲ್ಲಿ ನಮಗೆ ಪ್ರಾಮುಖ್ಯವಾದ ಪಾಠವನ್ನು ಕಲಿಸಿದ್ದಾರೆ. ಸರಿಯಾದ ಸೇವೆಗೆ ಉತ್ತಮವಾದ ಪ್ರತಿಫಲವಿರುತ್ತದೆ, ಯಾಕೆಂದರೆ ಎಲ್ಲರೂ "ಸಮವಾಗಿ ಹಂಚಿಕೊಳ್ಳುತ್ತಾರೆ." ನೀವು ಏನು ಮಾಡಬೇಕೋ ಅದನ್ನು ಮಾಡಿರಿ, ಇತರರು ಮಾಡುವ ಕಾರ್ಯಕ್ಕೆ ಸೂಕ್ಷ್ಮರಾಗಿರಿ, ಮತ್ತು ಅವರು ತಮ್ಮ ಕಾರ್ಯವನ್ನು ಮಾಡುವಂತೆ ಉತ್ತೇಜಿಸಿರಿ.

ಅಬ್ರಹಾಮ್ ಲಿಂಕನ್ ಅವರ ಜೀವನದಲ್ಲಿನ ಒಂದು ಘಟನೆಯ ಕುರಿತು ಬ್ರೂಸ್ ಬಾರ್ಟನ್ ಅವರು ಹೇಳುತ್ತಾರೆ. ಅದು ಬೆಸೋಲಿನವರ ಜಯಿಸುವ ಭಾವವನ್ನು ವ್ಯಕ್ತಪಡಿಸುತ್ತದೆ. ಯಾದವೀ ಕಲಹದ ಸಮಾಚಾರವನ್ನು ಖುದ್ದಾಗಿ ತಿಳುಕೊಳ್ಳುವ ಉದ್ದೇಶದಿಂದ ಅವರು ಜೆನೆರಲ್ ಮಕ್ ಕ್ಲೆಲಲನ್ ಅವರನ್ನು ಹುಡುಕಿದರು. ರಾಷ್ಟ್ರಪತಿ ಗಳು ಮತ್ತು ಸಭಾಸದಸ್ಯರು ಬಂದಾಗ ಮಕ್ ಕ್ಲೆಲಲನ್ ಅವರು ಮನೆಯಲ್ಲಿರಲಿಲ್ಲ. ಆದುದರಿಂದ ಲಿಂಕನ್ ಒಂದು ತಾಸುಗಳವರೆಗೆ ಕಾಯ್ದರು. ಕೊನೆಗೆ ಜೆನೆರಲ್ ಅವರು ಬಂದರು. ಲಿಂಕನ್ ಅವರನ್ನು ವಂದಿಸುವ ಬದಲು, ಅವರು ಮೇಲಿನ ಕೋಣೆಗೆ ತೆರಳಿ ಮಲಗಿಕೊಂಡರು. ತಾವು ಬಹಳವಾಗಿ ದಣಿದಿರುವದರಿಂದ ರಾಷ್ಟ್ರಪತಿಗಳನ್ನು ಕಾಣುವದಕ್ಕೆ ಆಗುವದಿಲ್ಲವೆಂದು ತಮ್ಮ ಸೇವಕನ ಹತ್ತಿರ ಹೇಳಿ ಕಳುಹಿಸಿದರು. ಲಿಂಕನ್‌ನವರ ಸಹೋದ್ಯೋಗಿ ಕೋಪದಿಂದ ಸಿಡಿದೆದ್ದರು, ಆದರೆ ಲಿಂಕನ್ ತಮ್ಮ ಕೈಗಳನ್ನು ಆ ಮನುಷ್ಯನ ಭುಜದ ಮೇಲೆ ಮೆಲ್ಲನೆ ಇಟ್ಟು, "ಅಷ್ಟೊಂದು ಕಠಿಣವಾಗಿ ತೆಗೆದು ಕೊಳ್ಳಬೇಡ. ಅವರು ಜಯವನ್ನು ತರುವದಾದರೆ ನಾನು ಮಕ್ ಕ್ಲೆಲಲನ್ ಅವರ ಕುದುರೆಯನ್ನೂ ಹಿಡಿದುಕೊಳ್ಳುವೆನು" ಅಂದರು!